605

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಹೆಚ್.ನರಸಿಂಹಮೂರ್ತಿ, ಸಹಾಯಕ ಕೃಷಿ ನಿರ್ದೇಶಕರು, ಸಿದ್ದಾಪುರ. ಉತ್ತರ ಕನ್ನಡ ಜಿಲ್ಲೆ ಇವರ ಮೇಲಿನ ಶಿಸ್ತು ಕ್ರಮ ಕುರಿತು.

ಓದಲಾಗಿದೆ.

1) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 75 ಕೃಪವಿ 2010, ದಿನಾಂಕ: 23-06-2011.
2) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 75 ಕೃಪವಿ 2010, ದಿನಾಂಕ: 12-07-2012.
3) ಕೃಷಿ ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-1/15/2010-11, ದಿನಾಂಕ: 18-08-2012.

**************

**ಪ್ರಸ್ತಾವನೆ:**

ಶ್ರೀ ಹೆಚ್.ನರಸಿಂಹಮೂರ್ತಿ, ಸಹಾಯಕ ಕೃಷಿ ನಿರ್ದೇಶಕರು, (ವಿಷಯ ತಜ್ಞ) ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ, ಇವರು ಈ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಸಹಾಯಕ ಕೃಷಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡದೇ ಬೇಜವಾಬ್ದಾರಿತನದಿಂದ ವರ್ತಿಸುತ್ತಾರೆ. ಕಛೇರಿಯ ನೌಕರರು ಮತ್ತು ಸಿಬ್ಬಂದಿಯವರೊಂದಿಗೆ ಅಸಭ್ಯವಾಗಿ ವರ್ತಿಸುವ ಮೂಲಕ ಕರ್ತವ್ಯಲೋಪ ಎಸಗಿರುತ್ತಾರೆಂಬ ಆಪಾದನೆಗೆ ಸಂಬಂಧಿಸಿದಂತೆ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅವರ ಮೇಲೆ ಶಿಸ್ತುಕ್ರಮವನ್ನು ಬಾಕಿಯಿರಿಸಿ ಅಮಾನತ್ತಿನಲ್ಲಿಯಿರಿಸಲಾಗಿತ್ತು. ನಂತರ ಶ್ರೀ ಹೆಚ್. ನರಸಿಂಹಮೂರ್ತಿ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಸಿದ್ದಾಪುರ. ಉತ್ತರ ಕನ್ನಡ ಜಿಲ್ಲೆ ಇವರ ಅಮಾನತ್ತಿನ ಆದೇಶವನ್ನು ಪುನರ್ ಪರಿಶೀಲಿಸಿದ ಸರ್ಕಾರ, ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯ ಶಿಸ್ತು ಕ್ರಮವನ್ನು ಬಾಕಿಯಿರಿಸಿ ಅಮಾನತ್ತಿನಿಂದ ತೆರವುಗೊಳಿಸಿ ಸಹಾಯಕ ಕೃಷಿ ನಿರ್ದೇಶಕರು(ವಿ.ತ), ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ ಇಲ್ಲಿ ಖಾಲಿಯಿರುವ ಹುದ್ದೆಗೆ ಮರು ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ. ಕೃಷಿ ಆಯುಕ್ತರು ಮೇಲೆ ಕ್ರಮ ಸಂಖ್ಯೆ: (3)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಶ್ರೀ ಹೆಚ್. ನರಸಿಂಹಮೂರ್ತಿ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಸಿದ್ದಾಪುರ. ಇವರಿಗೆ ಜನವರಿ 2012ರಿಂದ 19-07-2012ರ ಅಮಾನತ್ತಿನ ಅವಧಿಗೆ ಶೇಕಡ 75ರಷ್ಟು ಜೀವನಾಂಶ ಭತ್ಯೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಕೃಷಿ ಆಯುಕ್ತರ

--2--

ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿದ ಸರ್ಕಾರ, ಸದರಿ ಅಧಿಕಾರಿಯವರಿಂದ ಇವರ ಅಮಾನತ್ತು ಅವಧಿಯಲ್ಲಿ ಖಾಸಗಿ ಅಥವಾ ಸರ್ಕಾರಿ ಹಿತಾಸಕ್ತಿ ಹೊಂದಿರುವ ಯಾವುದೇ ಸಂಘ ಸಂಸ್ಥೆಗಳಲ್ಲಿ ನೌಕರಿ ಅಥವ ವ್ಯವಹಾರ, ವೃತ್ತಿ ಮತ್ತು ಉದ್ಯೋಗವನ್ನು ಹೊಂದಿಲ್ಲದೇ ಇರುವ ಬಗ್ಗೆ ದೃಡೀಕರಣ ಪತ್ರವನ್ನು ಪಡೆದು ಶೇಕಡ 50 ರಿಂದ 75ರಷ್ಟು ಜೀವನಾಧಾರ ಭತ್ಯೆಯನ್ನು ಮಂಜೂರು ಮಾಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಪವಿ 2010**
**ಬೆಂಗಳೂರು, ದಿನಾಂಕ: 29-05-2013.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಸರ್ಕಾರವು ಶ್ರೀ ಹೆಚ್.ನರಸಿಂಹಮೂರ್ತಿ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಸಿದ್ದಾಪುರ. ಉತ್ತರ ಕನ್ನಡ ಜಿಲ್ಲೆ, ಹಾಲಿ ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞ) ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ, ಇವರನ್ನು ಅಮಾನತ್ತಿನಲ್ಲಿರಿಸಿದ 6 ತಿಂಗಳ ನಂತರದ ಅವಧಿ ದಿನಾಂಕ: 23-01-2012 ರಿಂದ ಅಮಾನತ್ತನ್ನು ತೆರವುಗೊಳಿಸಿದ ಅವಧಿ ದಿನಾಂಕ: 19-07-2012 ರವರೆಗೆ ಪ್ರಸ್ತುತ ಅವರು ಪಡೆಯುತ್ತಿದ್ದ ಜೀವನಾಧಾರ ಭತ್ಯೆಯನ್ನು, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ 1958ರ ನಿಯಮ 98(ಬಿ) (2)ರನ್ವಯ ಶೇಕಡ 50 ರಿಂದ ಶೇಕಡ 75ಕ್ಕೆ ಹೆಚ್ಚಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್) 29/5/13
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:**

1) ಅಕೌಂಟ್ಸ್ ಆಫೀಸರ್, ಜಿಇ-5, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
5) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರುಗಳಿಗೆ.
6) ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಕೃಷಿ ಇಲಾಖೆ, ಇವರ ಮೂಲಕ)
7) ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ.